ಮಾಡಲಿ? ಎನ್ನುವ ನಿರ್ಲಿಪ್ತತೆ ಇತ್ತೀಚೆಗೆ ಕರಗತವಾಗಿ ಬಿಟ್ಟಿದೆ.

ಬಿಂದುಸಾರ ಮುಂದೆ ಎರಡೇ ತಿಂಗಳಲ್ಲಿ ಫ್ರಾನ್ಸಿಗೆ ಮಾಸ್ಟರ್ಸ್ ಮಾಡಲಿಕ್ಕೆ ಹೊರಟಿದ್ದೇನೆಂದು ಸುದ್ದಿಮಾಡಿ ಭಾರತವನ್ನೇ ತೊರೆದಾಗ ಆಫೀಸಿನ ಉಳಿದ ಹೆಂಗಸರೆಲ್ಲ ನನ್ನನ್ನೆ ವಿಚಿತ್ರರೀತಿಯಿಂದ ದುರುಗುಟ್ಟಿದ್ದರು. ಇವಳಿಗೆ ಬಿಂದುಸಾರಳ ಎಲ್ಲ ವಿಷಯವೂ ಗೊತ್ತು – ಖಾಸಾ ಗೆಳತಿಯಲ್ಲವೇ, ಅದಕ್ಕೆ ಬಾಯಿಬಿಡುವುದಿಲ್ಲ ಅಂತ ಅಂದುಕೊಂಡಿರುತ್ತಾರೆ. ಇಲ್ಲ, ಈಗ ಅವಳು ಹೋದಳು, ತನ್ನ ಜೀವದ ಗೆಳತಿಯನ್ನು ಕರೆಸಿಕೊಳ್ಳಬಹುದು ಮುಂದೆ ಎಂದು ಕುಹಕವಾಡಿದರೋ ಗೊತ್ತಿಲ್ಲ. ನಾನು ತಲೆಕೆಡಿಸಿಕೊಳ್ಳಲಿಲ್ಲ. ಬಿಂದುಸಾರ ಹೋಗಿದ್ದೂ ಅದರಲ್ಲೊಬ್ಬ ಜೇಸಿ ಅನ್ನುವ ಫ್ರೆಂಚ್ ಅಧಿಕಾರಿಯೊಂದಿಗೇನೆ ಅಂತಲೂ ನನಗೆ ಗೊತ್ತಿತ್ತು. ಅದನ್ನು ಬಿಂದುಸಾರ ಬಾಯಿಬಿಟ್ಟು ಎಂದೂ ಹೇಳಿರಲಿಲ್ಲ. ನಾನು ಕೇಳಲೂ ಹೋಗಿರಲಿಲ್ಲ. ಆದರೆ, ನನಗೆ ಗೊತ್ತಾಗಿಹೋಗಿತ್ತು.

ಈಗ ಯಾರನ್ನು ಕೇಳಿದರೂ ಒಂದು ಪ್ರಾಬ್ಲಂ... ಒಂದು ಗೋಳಿನಲ್ಲಿ ಸಿಕ್ಕಿಕೊಂಡಿದ್ದಾರೆ! ನನ್ನ ಸಮಸ್ಯೆಯನ್ನೂ ಯಾರ ಹತ್ತಿರ ಹೇಳಲು ಬಾಯಿ ಬರುವುದಿಲ್ಲ. ಎಲ್ಲಿ ಬಳಸಿಕೊಳ್ತಾರೋ ಎಂದು ಭಯಬೀಳುತ್ತೇನೆ. ಮನೆಯಲ್ಲಂತೂ ನಾನು ಡೈವೋರ್ಸ್ ಪಡೆದು ಘೋರ ಅಪರಾಧವನ್ನೆ ಮಾಡಿದ್ದೇನೆ ಎನ್ನುವಂತೆ ಗುರಾಯಿಸುತ್ತಾರೆ. ನನಗೆ ಬೇಡವೆನಿಸಿದವನ ಜತೆಗೆ ಹೇಗೆ ಸಾಯುವವರೆಗೂ ಬದುಕುವುದು? ಅದೂ ಸತ್ತಂತೆ ಅಲ್ಲವಾ? ಹಾಗೆ ಸಾಯುವ ಬದಲು ಹೀಗೆ ಸಾಯುವುದು ಲೇಸಲ್ಲವೇ? ಈಗೀಗ ಅಮ್ಮನೂ ಬಾಯಿ ಮುಚ್ಚಿಕೊಂಡಿದ್ದಾಳೆ.

ಬಿಂದುಸಾರಳ ರೀತಿಯೇ ಗೌರವ್ ಧುನ್ನಾ ಎಂಬ ಹುಡುಗಿ ಮನಿಷ್ ಎಂಬ ಹುಡುಗನ ಜತೆ ಪೂರ್ತಿ ಇಡಿಪಿ ಶಾಖೆಯ ವಹಿವಾಟನ್ನು ವಹಿಸಿಕೊಂಡಳು. ಅವರಿಬ್ಬರೂ ನನಗೆ ಸ್ನೇಹಿತರಾದಾಗಲೂ ಹೀಗೆ ಮುಜುಗರದ ಸನ್ನಿವೇಶಗಳನ್ನು ಎದುರಿಸುವಂತಾಗಿತ್ತು. ಅವರದು ಒಂದು ಸಾಜೇದಾರಿಯ ಕಂಪನಿ. ಐದು ವರ್ಷದಿಂದಲೂ ಪ್ರೇಮಿಸುತ್ತಿದ್ದರೂ ಅವರವರ ಕುಟುಂಬದವರು ಮದುವೆಗೆ ಒಪ್ಪಿರಲಿಲ್ಲ. ಹಾಗೆಂದು ಇಬ್ಬರೂ ತಮ್ಮ ಸಾಜೇದಾರಿಯ ಬಿಸಿನೆಸ್ಸನ್ನೂ ಬಿಟ್ಟಿರಲಿಲ್ಲ. ಗೌರವಳ ಮನೆಯವರಿಗೆಲ್ಲ ಗೊತ್ತು. ಅತ್ತಿಗೆ – ಅಣ್ಣಂದಿರು ಎಲ್ಲರಿಗೂ. ಸರಿ, ಗೌರವ್ – ಮನಿಶ್ ಇಬ್ಬರೂ ಮದುವೆಯಾಗಲು ನಾವು ಕೆಲವರು ರಿಜಿಸ್ಟ್ರಾರ್ ಆಫೀಸಿಗೆ ಹೋಗಲೂ ತಯಾರಾಗಿದ್ದೆವು. ಇಬ್ಬರು ಪ್ರೇಮಿಗಳು ಒಂದಾದರೆ ಅದಕ್ಕಿಂತ ಸಂತಸವೇನಿದೆ ಎಂದು ಯೋಚಿಸಿ. ಆದರೆ, ಇದ್ದಕ್ಕಿದ್ದಂತೆ ಒಂದು ಬೆಳಿಗ್ಗೆ ನಮ್ಮ ಸೆಕ್ಯೂರಿಟಿ ಆಫೀಸರ್ ಗುಲ್ಲೆಬ್ಬಿಸಿಬಿಟ್ಟ – ಈ ಹುಡುಗ ಮತ್ತು ಆ ಹುಡುಗಿ ಸೆಕೆಂಡ್ ಫ್ಲೋರಿನ ಅಧಿಕಾರಿಯ ರೂಮಿನಲ್ಲಿ ಲಾಕ್ ಮಾಡಿಕೊಂಡು ಗಂಟೆಗಟ್ಟಲೆ ಕಳೆದರು ಎಂದು. ನಾನು ಕೊನೆಗೆ ಎಲ್ಲ ಚೆಕ್ ಮಾಡಿ ಮೇನ್ ಡೋರ್ ಲಾಕ್ ಮಾಡೋಣ ಅಂತ ಬಂದಾಗ ಸೆಕ್ಯೂರಿಟಿ ಆಫೀಸರ್ ಅದು ತಪ್ಪು ಎಂದು ವಾದ ಮಂಡಿಸಿದ. ನಿಜವಿರಬಹುದೇನೋ ತಿಳಿಯದು.

ನಾವೆಲ್ಲ ಸಿಬ್ಬಂದಿ ಆರುವರೆಗೆಲ್ಲ ಹೊರಟುಹೋಗಿರುತ್ತೇವೆ. ಆಮೇಲೆ ಯಾವ ಯಾವ ಡಿಪಾರ್ಟ್‌ಮೆಂಟಿನವರು ಎಷ್ಟೊತ್ತು ಕೂತಿರುತ್ತಾರೋ ಏನೊ ಗೊತ್ತಿಲ್ಲ. ಕೊನೆಗೆ ಗೌರವ್ ಎಲ್ಲಿ ಕಾಲಿಟ್ಟರೂ ಅವಳು ಈಗಷ್ಟೇ ಮನಿಶ್ ಜತೆ ಮಲಗಿ ಎದ್ದು ಬಂದಿದ್ದಾಳೋ ಏನೋ ಎನ್ನುವಂತೆ ಅವಳನ್ನು ಕಚೇರಿಯ ಗಂಡಸರು ನೋಡತೊಡಗಿದ್ದರು. ನನಗೆ ಅದರಲ್ಲಿ ಯಾವ ವಿಶೇಷವೂ ಕಾಣಿಸಲಿಲ್ಲ. ಅವರವರ ಬದುಕು ಅವರದು. ಮೂಗು ತೂರಿಸಿ ಮಜ ತೆಗೆದುಕೊಳ್ಳುವಾಗ ಎಲ್ಲರಿಗೂ ಮಜವೆನಿಸುತ್ತದೆ. ಅದರಲ್ಲೂ ಗಂಡು ಹೆಣ್ಣಿನ ಗುಟ್ಟಿನ ವಿಷಯ ಬಂದಾಗ. ಸಂಬಂಧದ ವಿಷಯ ಬಂದಾಗ ಎಲ್ಲರೂ ಮಾನವೀಯತೆ